# ಆತನು ತನ್ನ ಕುರಿಗಳಿಗೋಸ್ಕರ ಪ್ರಾಣ ಕೊಟ್ಟನು

ಸಂಗ್ರಹ: ಸುನಯನ ವಾಲ್ಟರ್ಸ್

ಕುರಿಮಂದೆಯ ಒಡೆಯರಾದ ಆಲನ್ ಮತ್ತು ಮೇರಿ "ಶೇಬ" ಎಂಬ ಹೆಸರು ಹೊಂದಿದ ಆ ವಿಶಿಷ್ಟ ಜಾತಿಯ ನಾಯಿಯನ್ನು ಕುರಿದೊಡ್ಡಿಗಾಗಿ ತಂದಾಗ, ಅದು ಪುಟ್ಟದಾಗಿ, ಬಲು ಮುದ್ದಾಗಿತ್ತು. ಕುರಿಮಂದೆ ಕಾಯುವುದಕ್ಕಾಗಿಯೇ ಸಾಕುವ ಆ ನಾಯಿಮರಿಯನ್ನು ಪ್ರಾರಂಭದಲ್ಲಿಯೇ ಕುರಿದೊಡ್ಡಿಯಲ್ಲಿಡಲಾಗಿತ್ತು. ಏಕೆಂದರೆ ಒಳ್ಳೆಯ ಕೆಲಸಮಾಡಬೇಕಾದರೆ ಅದರ ಪ್ರೀತಿಯ ಸಂಪೂರ್ಣವಾಗಿ ಕುರಿಮಂದೆಯಲ್ಲಿ ನೆಲೆಗೊಳ್ಳಬೇಕಾಗಿತ್ತು. ನೋಡನೋಡುತ್ತಾ "ಶೇಬ" ಬೃಹತ್ ಗಾತ್ರದ, ಶಕ್ತಿಶಾಲಿ ನಾಯಿಯಾಯಿತು. 6 ತಿಂಗಳು ತುಂಬುವಾಗ ಇಡೀ ಕುರಿಮಂದೆಯ ಮುರಿದಾಳುವಾಗಿ ನಡೆಸುವ ಶಕ್ತಿ ಅದಕ್ಕಿತ್ತು. ತಾನು ಬೊಗಳಿದ ಕೂಡಲೇ ಇಡೀ ಮಂದೆಯು ತನ್ನ ಹಿಂದೆ ಬಂದು ನಿಲ್ಲುವಂತೆಮಾಡುವ ನಾಯಕತ್ವ ಪಡೆಯಿತು. ಮಾತು ಕೇಳದ ಕುರಿಗಳನ್ನು ಕೆಳಕ್ಕೆ ಕೆಡವಿ ಅವುಗಳ ಕುತ್ತಿಗೆಯ ಹಿಂಭಾಗವನ್ನು ನೋವಾಗದಂತೆ ಹಿಡಿದು ಹೋರಾಡಿ, ನಿಯಂತ್ರಿಸಿ ತನ್ನ ಮಾತು ಕೇಳುವಂತೆ ಮಾಡುತ್ತಿತ್ತು.

ಕೆಲವು ಬಾರಿ ನಾವು ನಿಯಂತ್ರಣ ತಪ್ಪಿದಾಗ, ಯೇಸು ಸ್ವಾಮಿಯೂ ನಮ್ಮ ಸಂಗಡ ಹೋರಾಡುತ್ತಾನೆ. ದೇವರ ಒಳ್ಳೆಯತನ ನಮ್ಮನ್ನು ಪಶ್ಚಾತ್ತಾಪಕ್ಕೆ ನಡೆಸುತ್ತದೆ. ಕೀರ್ತನೆ 119: 67 ಹೇಳುತ್ತದೆ – *"ಕಷ್ಟಾನುಭವಕ್ಕಿಂತ ಮುಂಚೆ ತಪ್ಪಿಹೋಗುತ್ತಿದ್ದೆನು. ಈಗಲಾದರೂ ನಿನ್ನ ನುಡಿಗಳನ್ನು ಕೈಕೊಳ್ಳುತ್ತೇನೆ."*

ಅಪರಿಚಿತರು ಕಣ್ಣಿಗೆ ಬಿದ್ದ ಕೂಡಲೇ "ಶೇಬ" ಭಯಂಕರವಾಗಿ ಬೊಗಳುತ್ತಿತ್ತು. ಕೂಡಲೇ ಕುರಿಮಂದೆಯು ಅವಳ ಹಿಂದೆ ನಿಲ್ಲುತ್ತಿತ್ತು. ಹೊಸಬರ ಮತ್ತು ಮಂದೆಯ ಮಧ್ಯೆ "ಶೇಬ" ನಿಲ್ಲುತ್ತಿತ್ತು. ಈ ಜಾತಿಯ ನಾಯಿಗಳಲ್ಲಿ ತಮ್ಮ ಮಂದೆಯನ್ನು ಕಾಯುವ ಅದ್ಭುತ ಪ್ರವೃತ್ತಿ ಇರುವುದರಿಂದ ಎಷ್ಟೋ ಬಾರಿ ಇವುಗಳು ಬಂದ ಅಪಾಯವನ್ನು ತಪ್ಪಿಸಲು ಹೋರಾಡಿ ಸಾಯುವುದಿದೆ.

ತನ್ನ ಕುರಿಮಂದೆಗಾಗಿ ತನ್ನ ಜೀವವನ್ನೇ ತೆತ್ತ ಯೇಸುಸ್ವಾಮಿಯ ಅದ್ಭುತ ಚಿತ್ರಣ ಇಲ್ಲಿದೆ. ನೀನು ದೇವರ ಕುರಿಯಾಗಿದ್ದರೆ, ಯೇಸುಸ್ವಾಮಿಯು, ಗರ್ಜಿಸುವ ಸಿಂಹದೋಪಾದಿಯಲ್ಲಿ ನಾಶನಕ್ಕಾಗಿ ಕಾಯುತ್ತಿರುವ ಸೈತಾನನಿಂದ ತಪ್ಪಿಸಲು ತನ್ನ ಪ್ರಾಣವನ್ನು ನಿನಗಾಗಿ ತೆತ್ತನು. ನಿನ್ನ ರಕ್ಷಣೆಗಾಗಿ ಪ್ರಭುವಾದ ಯೇಸುವಿನ ಹಿಂದೆ ನಿಲ್ಲು. ಆತನು ನಿನ್ನ ಪಾಪಗಳನ್ನು ತಾನು ಸುರಿಸಿದ ರಕ್ತದಿಂದ ತೊಳೆದು ನಿನಗಾಗಿ ಪರದೈಸದ ಬಾಗಿಲನ್ನು ತೆರೆಯುತ್ತಾನೆ.

*"ನಾನು ಒಳ್ಳೇ ಕುರುಬನು; ಒಳ್ಳೇ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ."* (ಯೋಹಾನ 10:11–16 ಓದಿರಿ)